## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿ ಇವರು ನಿಯಮ 330ರ ಅಡಿ ಪ್ರಸ್ತಾಪಿಸಿರುವ ಸೂಚನೆಗೆ ಸರ್ಕಾರದ ಉತ್ತರ

### ಸೂಚನೆ

ಕಳೆದ 5 ವರ್ಷಗಳಿಂದಲೂ ಸಿಂಧನೂರು ತಾಲ್ಲೂಕನ್ನು ಜಿಲ್ಲೆಯಾಗಿರುವಂತೆ ನಿರಂತರ ಹೋರಾಟಗಳು ನಡೆದಿವೆ. ಜಿಲ್ಲಾ ಕೇಂದ್ರದಿಂದ ಸಿಂಧನೂರು ಸುಮಾರು 100 ಕಿ.ಮೀ. ದೂರದಲ್ಲಿದೆ. ಸಿಂಧನೂರಿಗೆ ಕಾರಟಗಿ, ಕನಕಗಿರಿ, ತಾವರಗೆರ, ಮಸ್ಕಿ ಮತ್ತು ಲಿಂಗಸೂಗೂರು ತಾಲೂಕುಗಳು ಅತ್ಯಂತ ಸಮೀಪದಲ್ಲಿದ್ದು ಸದರಿ ತಾಲೂಕುಗಳಲ್ಲಿ ಭತ್ತ, ಕಬ್ಬು ಮತ್ತು ತೋಟಗಾರಿಕೆ ಬೆಳೆಯನ್ನು ಹೇರಳವಾಗಿ ಬೆಳೆಯುತ್ತಾರೆ. ಸದರಿ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದಂತೆ ಪೂರಕವಾದ ಸೌಲಭ್ಯಗಳಿಗೆ ರೈಸ್ ಮಿಲ್ಲುಗಳು, ಕೋಲ್ಡ್ ಸ್ಟೋರೇಜ್‌ಗಳು ಹಾಗೂ ಇನ್ನಿತರ ಕೃಷಿಗೆ ಸಂಬಂಧಿಸಿದ ಕೈಗಾರಿಕೆ ಚಟುವಟಿಕೆಗಳು ವ್ಯಾಪಾರ ವಹಿವಾಟುಗಳಿಗೆ ಸಿಂಧನೂರಿನಲ್ಲಿ ಪೂರಕ ವಾತಾವರಣ ಇರುತ್ತದೆ. ಜೊತೆಗೆ ಸಿಂಧನೂರಿನಲ್ಲಿ ಏಷ್ಯದಲ್ಲೆ ಅತೀ ಹೆಚ್ಚು ಟ್ರ್ಯಾಕ್ಟರ್‌ಗಳು ಮಾರಾಟವಾಗುತ್ತಿದ್ದು ಹಾಗೂ ಅತೀ ಹೆಚ್ಚು ಶಾಲಾ ಕಾಲೇಜುಗಳು ಇರುವಂತಹ ತಾಲ್ಲೂಕು ಆಗಿದ್ದು, ಅಭಿವೃದ್ಧಿ ಹೊಂದುತ್ತಿರುವ ನಗರಗಳಲ್ಲಿ ಪ್ರಮುಖವಾಗಿದೆ. ಬಳ್ಳಾರಿಯಿಂದ 90.ಕಿ.ಮೀ. ರಾಯಚೂರುಯಿಂದ 90 ಕಿ.ಮೀ. ಕೊಪ್ಪಳದಿಂದ 90.ಕಿ.ಮೀ. ಅಂತರದಲ್ಲಿದೆ, ಕೇವಲ 30-40 ಕಿ.ಮೀ. ಅಂತರದಲ್ಲಿ ಮೇಲ್ಕಂಡ ಎಲ್ಲಾ ತಾಲ್ಲೂಕುಗಳು ಇರುವುದರಿಂದ ಸಿಂಧನೂರನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಲು ಸೂಕ್ತವಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಹಲವಾರು ಹೋರಾಟಗಳು ನಡೆದಿವೆ ಮತ್ತು ಜನರ ಒತ್ತಾಯವು ಕೂಡ ಆಗಿದೆ ಹಾಗಾಗಿ ಸರ್ಕಾರ ಈ ಕುರಿತು ಸಮಿತಿ ಒಂದನ್ನು ರಚಿಸಿ ಅಧ್ಯಯನ ನಡೆಸಿ ಸೂಕ್ತ ಕ್ರಮದ ಕುರಿತು ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ..

### ಉತ್ತರ:

ಸಿಂಧನೂರು ತಾಲ್ಲೂಕು ಜಿಲ್ಲಾ ಕೇಂದ್ರ ರಾಯಚೂರುನಿಂದ ಸುಮಾರು 100 ಕಿ.ಮೀ. ಅಂತರದಲ್ಲಿ ಇರುತ್ತದೆ. ಸಿಂಧನೂರು ತಾಲ್ಲೂಕಿನಿಂದ ಈ ಕೆಳಕಂಡ ತಾಲ್ಲೂಕುಗಳಿಗಿರುವ ಅಂತರ ಕೆಳಕಂಡಂತಿದೆ.

1. ಕಾರಟಗಿ - 22 ಕಿ.ಮೀ.
2. ಕನಕಗಿರಿ - 50 ಕಿ.ಮೀ.
3. ತಾವರಗೇರಾ - 40 ಕಿ.ಮೀ.
4. ಮಸ್ಕಿ - 26.ಕಿ.ಮೀ.
5. ಲಿಂಗಸೂಗೂರು - 55 ಕಿ.ಮೀ.

ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕನ್ನು ನೂತನ ಜಿಲ್ಲಾ ಕೇಂದ್ರವನ್ನಾಗಿ ಸೃಜಿಸುವಂತೆ ಕೋರಿಕೆಗಳು ಸ್ವೀಕೃತವಾಗಿರುತ್ತವೆ. ಸದರಿ ಕೋರಿಕೆಗಳನ್ನು ಸೂಕ್ತ ರೀತಿಯಲ್ಲಿ ಪರಿಶೀಲಿಸಿ, ಅಗತ್ಯವಿದ್ದಲ್ಲಿ, ಸರ್ಕಾರಕ್ಕೆ ವಿವರವಾದ ಪ್ರಸ್ತಾವನೆ ಸಲ್ಲಿಸುವಂತೆ ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ ಇವರಿಗೆ ಪತ್ರ ಬರೆಯಲಾಗಿದೆ.

ಹೊಸದಾಗಿ ಜಿಲ್ಲೆಗಳನ್ನು ರಚಿಸಲು ನಿರ್ದಿಷ್ಟ ಮಾನದಂಡಗಳನ್ನು ರೂಪಿಸಿರುವುದಿಲ್ಲ. ಯಾವುದೇ ಒಂದು ಪ್ರದೇಶ / ತಾಲ್ಲೂಕನ್ನು ಜಿಲ್ಲೆಯನ್ನಾಗಿ ರಚಿಸುವ ಸಂದರ್ಭದಲ್ಲಿ ಅಲ್ಲಿನ ಭೌಗೋಳಿಕ ಹಿನ್ನೆಲೆ, ಜನಸಂಖ್ಯೆ, ಹಿಂದುಳಿದಿರುವಿಕೆ, ಹೊಸ ಜಿಲ್ಲೆಯ ರಚನೆಯಿಂದಾಗುವ ಅನುಕೂಲ, ಸಾರ್ವಜನಿಕ ಆಶೋತ್ತರಗಳಿಗೆ ಸ್ಪಂದನೆ, ತಾಲ್ಲೂಕು ಕೇಂದ್ರ ಮತ್ತು ಜಿಲ್ಲಾ ಕೇಂದ್ರಗಳಿಗಿರುವ ದೂರ ಸೇರಿದಂತೆ ಸಾರ್ವಜನಿಕ ಹಿತಾಸಕ್ತಿ ಮತ್ತು ಆಡಳಿತಾತ್ಮಕ ಅಂಶಗಳನ್ನು ಪರಾಮರ್ಶಿಸಲಾಗುತ್ತದೆ.

ಇದರ ಜೊತೆಗೆ, ನೂತನ ಜಿಲ್ಲೆಗಳನ್ನು ರಚಿಸುವ ವಿಷಯವು ಸರ್ಕಾರದ ಸಾಮಾನ್ಯ ನೀತಿಗೆ ಸಂಬಂಧಿಸಿದ್ದಾಗಿದೆ. ಯಾವುದೇ ಒಂದು ತಾಲ್ಲೂಕು / ಪ್ರದೇಶವನ್ನು ಜಿಲ್ಲೆಯನ್ನಾಗಿ ರಚಿಸಬೇಕಾದರೆ ಭೌಗೋಳಿಕ ಮತ್ತು ಆಡಳಿತಾತ್ಮಕ ಅಗತ್ಯತೆಗಳ ಜೊತೆಗೆ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಸಹ ಅವಲಂಬಿಸಿದ್ದು, ಸಂಪನ್ಮೂಲಗಳ ಕ್ರೋಢೀಕರಣ ಮತ್ತು ಹಣಕಾಸಿನ ಇತಿಮಿತಿಗಳನ್ನು ಒಳಗೊಂಡಿರುತ್ತದೆ. ಪ್ರಸ್ತುತ ರಾಜ್ಯದಲ್ಲಿ ಜಿಲ್ಲೆಗಳನ್ನು ರಚಿಸುವ ಕುರಿತು ಯಾವುದೇ ತಾತ್ವಿಕ ನಿರ್ಣಯ ಕೈಗೊಂಡಿರುವುದಿಲ್ಲ.

**ಸಂಖ್ಯೆ: ಕಂಇ/ 68/ ಎಲ್ ಆರ್ ಡಿ / 2024**

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು